ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ
ICAR JSS Krishi Vigyan Kendra
Suttur - 571 129, Nanjangud Taluk, Mysuru District
☏: 08221-232218 | 🖷: 08221-232377 | jsskvk@gmail.com | www.jsskvk.in

## ರೈತರೊಂದಿಗೆ ಪ್ರಧಾನ ಮಂತ್ರಿಗಳವರ ಸಂವಾದ

## ಸುತ್ತೂರಿನಲ್ಲಿ ಆಯೋಜಿಸಿದ ನೇರ ಪ್ರಸಾರ ಕಾರ್ಯಕ್ರಮ

**ಜೂನ್ 20:** ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಕೃಷಿ ಕ್ಷೇತ್ರದ ಆಗುಹೋಗುಗಳ ಕುರಿತು ದೇಶದ ವಿವಿಧ ಜಿಲ್ಲೆಗಳ ಆಯ್ದ ರೈತರೊಂದಿಗೆ ದಿನಾಂಕ 20.06.2018 ರಂದು ನೇರ ಸಂವಾದ ನಡೆಸಿದರು. ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಈ ಕಾರ್ಯಕ್ರಮದ ಟಿವಿ ನೇರ ಪ್ರಸಾರವನ್ನು ಆಯೋಜಿಸಲಾಗಿತ್ತು. ವಿವಿಧ ರಾಜ್ಯ-ಜಿಲ್ಲೆಗಳಿಂದ ಸಂವಾದದಲ್ಲಿ ಭಾಗವಹಿಸಿದ ರೈತರ ಅನುಭವಗಳು ನಮ್ಮ ಜಿಲ್ಲೆಯ ರೈತರಿಗೆ ಸ್ಫೂರ್ತಿದಾಯಕ ಹಾಗೂ ಮಾರ್ಗದರ್ಶಕವಾಗಿದ್ದವು. ಮಣ್ಣು ಆರೋಗ್ಯ ಅಭಿಯಾನ, ಹನಿ ನೀರಾವರಿ ತಂತ್ರಜ್ಞಾನ, ಕೋಳಿ ಸಾಕಾಣಿಕೆಯಂತಹ ಉಪಕಸುಬು, ಬಾಡಿಗೆ ಆಧಾರದ ಮೇಲೆ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವ ಅನುಭವ, ರೈತ ಉತ್ಪಾದಕ ಕಂಪನಿಗಳು, ಬೆಳೆ ವಿಮೆ ಯೋಜನೆ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮುಂತಾದ ವಿಷಯಗಳು ನಮ್ಮ ಭಾಗದ ರೈತರಿಗೆ ಅನುಕರಣೀಯವಾಗಿದ್ದವು.

ನೇರ ಪ್ರಸಾರ ಕಾರ್ಯಕ್ರಮದ ನಂತರ ಕೆವಿಕೆಯ ಶ್ರೀ ಜೆ.ಜಿ. ರಾಜಣ್ಣನವರು ಮಣ್ಣು ಆರೋಗ್ಯ ಅಭಿಯಾನದಡಿ ಮಣ್ಣು ಆರೋಗ್ಯ ಚೀಟಿ ಕುರಿತು ಮಾಹಿತಿ ನೀಡಿ ರೈತರು ಗೊಬ್ಬರಗಳ ಮೇಲಿನ ಖರ್ಚು ಕಡಿಮೆ ಮಾಡುವ ಅವಕಾಶಗಳ ಕುರಿತು ಮನವರಿಕೆ ಮಾಡಿಕೊಟ್ಟರು. ರಾಷ್ಟ್ರೀಯ ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್‌ನ ಮೈಸೂರು ವಿಭಾಗದ ವ್ಯವಸ್ಥಾಪಕರಾದ ಶ್ರೀ ವಿನೋದರವರು ರೈತರಿಗೆ ಅವರ ಸಂಸ್ಥೆಯಿಂದ ದೊರಕುವ ಗೊಬ್ಬರಗಳ ಮೇಲೆ ರೈತರಿಗೆ ಸಿಗುವ ಸಬ್ಸಿಡಿ ಕುರಿತು ಮಾಹಿತಿ ನೀಡಿದರು. ಮೆ. ಜೋಗಿತಾ ಪ್ಲಾಸ್ಟಿಕ್ ಪೈಪ್ಸ್ ಸಂಸ್ಥೆಯ ಹಿರಿಯ ವ್ಯವಸ್ಥಾಪಕರಾದ ಶ್ರೀ ಹೆಚ್.ವಿ. ಮುರಳಿ ಮಾಧವ ರವರು ತಮ್ಮ ಕಂಪನಿಯ ಹನಿ ನೀರಾವರಿ ಪದ್ಧತಿಯ ವಿವಿಧ ಸಲಕರಣೆಗಳನ್ನು ಪರಿಚಯಿಸಿದರು. ವರುಣ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಶ್ರೀ ಅಯರಹಳ್ಳಿ ಮಾದಪ್ಪನವರು ರೈತ ಉತ್ಪಾದಕ ಕಂಪನಿಗಳ ಕುರಿತ ಸಾಧಕ-ಭಾದಕಗಳನ್ನು ಪರಿಚಯ ಮಾಡಿಕೊಟ್ಟರು. ಪ್ರಧಾನಮಂತ್ರಿಗಳ ಭಾಷಣವನ್ನು ಕೇಂದ್ರದ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಅರುಣ್ ಬಳಮಟ್ಟಿಯವರು ಕನ್ನಡಕ್ಕೆ ತರ್ಜುಮೆ ಮಾಡಿದರು. ಆತ್ಮಾ ಯೋಜನೆಯ ಹಲವಾರು ಕಾರ್ಯಕ್ರಮಗಳ ಕುರಿತು ಯೋಜನೆಯ ಉಪ ನಿರ್ದೇಶಕರಾದ ಶ್ರೀ ಕೆ.ಆರ್. ರವೀಂದ್ರರವರು ತಿಳಿಸಿದರು. ಕಾರ್ಯಕ್ರಮದಲ್ಲಿ ಸುಮಾರು 100 ರೈತರು ಭಾಗವಹಿಸಿದ್ದರು.